## ಕ್ರೀಂ ಬ್ಯಾನ್ ಮಾಡಲಿ

ಸಂಜೆ ಕಾಫಿ ಕುಡಿಯುತ್ತ ರಂಗ, ತನ್ನ ಗೆಳೆಯನಿಗೆ ಹೇಳಿದ, 'ಸರ್ಕಾರ ಸಾವಿರ ರೂಪಾಯಿ ನೋಟುಗಳನ್ನು ರದ್ದು ಮಾಡಿದ್ದರಿಂದ ಎಷ್ಟೊ ಜನರ ಕಪ್ಪು ಹಣ ಬಯಲಿಗೆ ಬಂತು ನೋಡು...' ಅದಕ್ಕೆ ಗೆಳೆಯ ಉತ್ತರಿಸಿದ, 'ಹೌದು, ಆದರೆ ಮುಖಕ್ಕೆ ಹಚ್ಚಿಕೊಳ್ಳುವ ಕ್ರೀಂ ಬ್ಯಾನ್ ಮಾಡಿದರೆ ಎಷ್ಟೋ ಜನರ ಅಸಲಿ ಬಣ್ಣ ಬಯಲಿಗೆ ಬರುತ್ತದೆ...'

**ಯು.ಎಸ್. ಶ್ರೀನಿವಾಸರಾವ್**



## ಯಾವ ಕೊನೆಯಲ್ಲಿ?



ವಕೀಲ ಶಾಮರಾಯರಿಗೂ ಇನ್ನೊಬ್ಬ ವಕೀಲ ನರಸಿಂಹರಾಯರಿಗೂ ಆಗಿ ಬರುತ್ತಿರಲಿಲ್ಲ. ಎಲ್ಲೇ ಸಿಕ್ಕರೂ ನರಸಿಂಹರಾಯರು ಮಾತಿನಲ್ಲೇ ಶಾಮರಾಯರ ಕಾಲೆಳೆಯುತ್ತಿದ್ದರು. ಒಂದು ಸಮಾರಂಭದಲ್ಲಿ ಇಬ್ಬರೂ ಸಂಧಿಸಬೇಕಾಯಿತು. ಅಲ್ಲಿ ನಾಲ್ಕಾರು ಜನ ವಕೀಲರಿದ್ದರು. ಶಾಮರಾಯರ ಮಾತಿನ ಧಾಟಿ ನರಸಿಂಹರಾಯರಿಗೆ ಸಿಟ್ಟು ತರಿಸುತ್ತಿತ್ತು. ಆದರೆ ನೇರವಾಗಿ ಸಿಟ್ಟು ಹೊರಹಾಕಲು ಸಾಧ್ಯವಿರಲಿಲ್ಲ. ಆಗ ತಮ್ಮ ಕೈಯಲ್ಲಿದ್ದ ಛತ್ರಿಯಿಂದ ಶಾಮರಾಯರ ಕಡೆಗೆ ತೋರಿಸುತ್ತ, 'ಈ ಛತ್ರಿಯ ಕೊನೆಯಲ್ಲಿ ಒಬ್ಬ ಮೂರ್ಖನಿದ್ದಾನೆ' ಎಂದರು. ಶಾಮರಾಯರು ಸ್ವಲ್ಪವೂ ವಿಚಲಿತರಾಗದೇ ಮಂದಹಾಸದಿಂದ, 'ಯಾವ ಕೊನೆಯಲ್ಲಿ?' ಅಂದರು. ಏಕೆಂದರೆ ಛತ್ರಿಯ ಇನ್ನೊಂದು ತುದಿಯಲ್ಲಿ ನರಸಿಂಹರಾಯರಿದ್ದರು!

**ಎಂ.ಆರ್. ಮುಕುಂದ**